ಮಹಾರಾಷ್ಟ್ರದ ಕೊಯ್ನಾಡ್ಯಾಂನಿಂದ ನೀರನ್ನು ಪಡೆಯುವ ವ್ಯವಸ್ಥೆಯನ್ನು ಮಾಡುತ್ತಿತ್ತು. ಈ ವರ್ಷ ಏಕೋ ನೀರು ಸರಬರಾಜು ಮಂಡಳಿಯ ಮತ್ತು ನೀರಾವರಿ ಇಲಾಖೆಯ ಕಾರ್ಯದರ್ಶಿಯವರು ಮಹಾರಾಷ್ಟ್ರದಿಂದ ನೀರನ್ನು ಪಡೆಯುವ ಬಗ್ಗೆ ಪ್ರಯತ್ನ ಮಾಡಿದರೂ ಸಹ ಇದುವರೆಗೆ ಯಾವುದೇ ಕ್ರಮ ಜಾರಿಗೊಂಡಿಲ್ಲ. ಬಹುಶಃ ಕರ್ನಾಟಕ ಸರ್ಕಾರದಿಂದ ಮಹಾರಾಷ್ಟ್ರಕ್ಕೆ ಬಾಕಿ ಹಣವನ್ನು ಕೊಡಬೇಕಾಗಿರುವ ಹಿನ್ನೆಲೆಯಲ್ಲಿ ಅವರು ನೀರನ್ನು ಕೊಟ್ಟಿಲ್ಲವೆಂಬ ವದಂತಿ ಇದೆ. ಇನ್ನು 8-10 ದಿವಸಗಳಲ್ಲಿ ಬಿಜಾಪುರಕ್ಕೆ ಕುಡಿಯುವ ನೀರಿನ ಸಮಸ್ಯೆ ಬಹಳ ತೀವ್ರಗೊಳ್ಳುವುದರಿಂದ ದಯಮಾಡಿ ಮಹಾರಾಷ್ಟ್ರದ ಕೊಯ್ನಾ ಡ್ಯಾಂನಿಂದ ನೀರನ್ನು ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಯವರು): ಮಾನ್ಯ ಅಧ್ಯಕ್ಷರೆ, ಈ ಹಿಂದೆ ಇಂಥ ಸಂದರ್ಭದಲ್ಲಿ ಮಹಾರಾಷ್ಟ್ರದವರು ನಮ್ಮ ಸಹಾಯಕ್ಕೆ ಬಂದಿದ್ದರೆ ಈ ಸಲವೂ ನಮ್ಮ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಹೇಳಿ ಕೇಳುತ್ತೇನೆ. ಇಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದರಿಂದ ಇನ್ನೂ ಅವಶ್ಯಕತೆ ಕಂಡು ಬಂದರೆ ನಾನು ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಜೊತೆ ಇದರ ಬಗ್ಗೆ ಮಾತನಾಡುತ್ತೇನೆ.

ಬ) ಮಂಗಳೂರು ಜಿಲ್ಲೆಯ ಗುತ್ಯಾತ್ತೂರು ಗ್ರಾಮದಲ್ಲಿ ಎಂ.ಆರ್.ಪಿ.ಎಲ್ ಸಂಸ್ಥೆಯು ರೈತರಿಗೆ ಪರಿಹಾರ ನೀಡದಿರುವುದು.

ಶ್ರೀ ಕುಂಬಳೆ ಸುಂದರರಾವ್ (ಸೂರತ್ಕಲ್): ಮಾನ್ಯ ಅಧ್ಯಕ್ಷರೆ, ಮಂಗಳೂರು ಜಿಲ್ಲೆ ತಾಲ್ಲೂಕಿನ ಗುತ್ಯಾತ್ತೂರು ಬಹಳ ಗ್ರಾಮಗಳಲ್ಲಿ ಎಂ.ಆರ್.ಪಿ.ಎಲ್. ಸಂಸ್ಥೆ ಆವರಿಸಿದೆ. ಆ ಸಂಸ್ಥೆಗಾಗಿ ಜಮೀನು ಕೊಟ್ಟವರ ಗೋಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಸಂಸ್ಥೆ ಉತ್ಪಾದನೆ ಮಾಡುತ್ತಿದೆ, ವ್ಯಾಪಾರ ಮಾಡುತ್ತಿದೆ ಅದರ ಸಂಪೂರ್ಣ ಫಲವನ್ನು ಅದು ಪಡೆಯುತ್ತಿದೆ. ಆದರೆ ಅದಕ್ಕಾಗಿ ಯಾರು ಜಮೀನು ಕೊಟ್ಟರೋ ಅವರ ಗೋಳಿಗೆ ಸರ್ಕಾರ ಸ್ಪಂದಿಸುವ ಅಗತ್ಯವಿದೆ. ಎತ್ತರದ ಪ್ರದೇಶದ ಕೆಳಭಾದು ಎಂಬ ಸ್ಥಳಕ್ಕೆ ಅವರುಗಳನ್ನು ಸ್ಥಳಾಂತರ ಮಾಡಿದ್ದಾರೆ. ನಿವೇಶನ ಕೊಟ್ಟಿದ್ದಾರೆ. ಅಲ್ಲಿ ಕೊಳವೆ ಬಾವಿಗಳನ್ನು ಕೊರೆದರೆ ಉಪ್ಪು ನೀರು ಬರುತ್ತಿದೆ. ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಎಂ.ಐ.ಡಿ.ಬಿ.ರವರುಗಳು ಏನು ಕೊಳವೆ ಬಾವಿ ತೋಡಿದ್ದಾರೆ ಅವುಗಳೆಲ್ಲಾ ಬತ್ತಿಹೋಗಿದೆ. ಬಾವಿ ಕೊರೆದರೆ ಉಪ್ಪು ನೀರು ಬರುವುದರಿಂದ ಅವರಿಗೆ ಹೊಸ ಬಾವಿ ಕೊರೆಯಿರಿ ಎಂದು ಹೇಳುವ ಸ್ಥಿತಿಯಲ್ಲಿ ನಾವಿಲ್ಲ. ನಮಗಿರುವ ಒಂದೇ ಒಂದು ಪರಿಹಾರವೇನೆಂದರೆ, ಎಂ.ಆರ್.ಪಿ.ಎಲ್.ನವರೇನು ತುಂಬೆ ಡ್ಯಾಂನಿಂದ ನೀರನ್ನು ಪಡೆದಿದ್ದರು ಆ ನೀರಿನ ಕೊಳವೆ ಕಾಟಿಪಾಳ್ಳ ಮಾರ್ಗದಲ್ಲಿ ಹಾದುಹೋಗಿದೆ. ಅಲ್ಲಿಂದ ಎರಡು ಕಿಲೋಮೀಟರ್ ಪೈಪನ್ನು ಹಾಕಿದರೆ ಆ ನಿರ್ವಸತಿಕರಿಗೆ ನೀರನ್ನು ಕೊಡಲು

ಸಾಧ್ಯವಾಗುತ್ತದೆ. ಮಳೆ ಬಂದಾಗ ಪರಿಸ್ಥಿತಿ ಸುಧಾರಿಸುತ್ತದೆ ಎಂದು ಹೇಳತಕ್ಕ ಸ್ಥಿತಿಯಲ್ಲಿಲ್ಲ. ಅಲ್ಲಿ ನಾನು ಹೋದರೆ ಜನರು ಊರಿನ ಒಳಕ್ಕೆ ಬಿಡುವುದಿಲ್ಲ. ಕುಡಿಯಲು ನೀರನ್ನು ಕೊಡದಿರುವ ಶಾಸಕ ಎಂದು ಹೇಳುತ್ತಾರೆ. ಆದ್ದರಿಂದ ದಯವಿಟ್ಟು ಈ ಗಂಭೀರ ಸಮಸ್ಯೆಯನ್ನು ಅರ್ಥ ಮಾಡಿಕೊಂಡು ತುಂಬೆ ಡ್ಯಾಂನ ನೀರು ಅವರು ಕುಡಿಯಲು ಸಿಗುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ (ಮೀನುಗಾರಿಕಾ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ನಿರ್ವಸಿತಿಕರಿಗೆ ಆಗಿರುವ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಹೇಳಿದ್ದಾರೆ. ಅವರು ಸಲಹೆಯನ್ನೂ ಕೊಟ್ಟಿದ್ದಾರೆ. ಅದನ್ನು ಪರಿಶೀಲಿಸಿ ಅತಿ ಶೀಘ್ರದಲ್ಲಿ ಕ್ರಮ ತೆಗೆದುಕೊಳ್ಳಲು ಸಂಬಂಧಪಟ್ಟವರಿಗೆ ತಿಳಿಸುತ್ತೇನೆ.

ಓ) ಸೋಮವಾರಪೇಟೆ ತಾಲ್ಲೂಕಿನ ಕುಶಾಲನಗರ ಹೋಬಳಿಯ ಕುಕ್ಕಾಹೊಳೆ ಹೂಳು ಎತ್ತದೆ ಹಾಗೆಯೇ ಬಿಟ್ಟಿರುವುದು.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್ (ಸೋಮವಾರಪೇಟೆ): ಮಾನ್ಯ ಅಧ್ಯಕ್ಷರೆ, ಸೋಮವಾರಪೇಟೆ ತಾಲ್ಲೂಕಿನ ಕುಶಾಲನಗರ ಹೋಬಳಿಯ ಕಕ್ಕೆ ಹೊಳೆ ಎಂಬ ಹೊಳೆಗೆ ಸಂಬಂಧಪಟ್ಟ ನಾಲೆ ಕಳೆದ ಎರಡು ವರ್ಷದಿಂದ ಕೆಸರು ತುಂಬಿ ಹೂಳು ಎತ್ತದೆ ಹಾಗೆಯೇ ಬಿಟ್ಟಿರುವುದರಿಂದ ಸುಮಾರು ಐದುನೂರು ಎಕರೆ ಜಮೀನಿಗೆ ನೀರಿಲ್ಲದೆ ರೈತರು ತೊಂದರೆ ಪಡುತ್ತಿದ್ದಾರೆ. ಹಾಗೆಯೇ ಸೋಮವಾರಪೇಟೆಯ ಐಗೂರು ಪಂಚಾಯಿತಿಗೆ ಸಂಬಂಧಪಟ್ಟಂತೆ ಕಾಜೂರು ಹೊಳೆಯಲ್ಲಿ ಕೂಡ ಹೂಳು ಎತ್ತದೆ ರೈತರಿಗೆ ಬಹಳ ತೊಂದರೆಯಾಗಿದೆ. ಬೆಳೆ ನಾಶವಾಗಿದೆ. ಆದ್ದರಿಂದ ಈ ವರ್ಷವಾದರೂ ಆ ಕೆರೆಗಳ ಹೂಳನ್ನು ಎತ್ತಿ ರೈತರ ಬೆಳೆಗೆ ಸಹಾಯ ಮಾಡಿಕೊಡಬೇಕಾಗಿ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಕೆ.ಎನ್.ನಾಗೇಗೌಡ (ಭಾರಿ ನೀರಾವರಿ ಸಚಿವರು): ಮಾನ್ಯ ಅಧ್ಯಕ್ಷರೆ, ಸಣ್ಣ ನೀರಾವರಿ ಸಚಿವರಿಗೆ ಇದರ ಬಗ್ಗೆ ತಿಳಿಸಿ ಸೂಕ್ತ ಕ್ರಮ ತೆಗೆದಕೊಳ್ಳಲು ವ್ಯವಸ್ಥೆ ಮಾಡುತ್ತೇನೆ.

ಕ) ಮಂಗಳೂರಿನಲ್ಲಿ ಕನ್ನಡ ಅಕಾಡಮಿ ಪ್ರಶಸ್ತಿ ಪ್ರಧಾನ ಸಮಾರಂಭ ಮತ್ತು ಪುಸ್ತಕ ಕಾರ್ಯಕ್ರಮಕ್ಕೆ ಸಂಬಂಧಪಟ್ಟ ಮಂತ್ರಿಗಳು ಬಾರದೇ ಇರುವುದು.

ಶ್ರೀ ಎನ್.ಯೋಗೇಶ್ ಭಟ್ (ಮಂಗಳೂರು): ಮಾನ್ಯ ಅಧ್ಯಕ್ಷರೆ, ನಿನ್ನೆ ಮಂಗಳೂರಿನಲ್ಲಿ ಪ್ರತಿಷ್ಠಿತವಾಗಿರತಕ್ಕ ಕನ್ನಡ ಸಾಹಿತ್ಯ ಅಕಾಡಮಿ ಪ್ರಶಸ್ತಿ ಪ್ರಧಾನ ಸಮಾರಂಭ ಮತ್ತು ಪುಸ್ತಕ ಕಾರ್ಯಕ್ರಮ ನಡೆಯಿತು. ಈ ಸಂದರ್ಭದಲ್ಲಿ ಡಾ: ವಿಜಯ ಸಾಸನೂರ್, ಶ್ರೀ ಸಿಂಗ್ವಿ ಬೋಳಾರ್ ಮಹಮದ್ ಉಪನಿ,